ಸಾಕ್ಷಿಯನ್ನು ಪ್ರಮಾಣಿಕರಿಸಿದ ದಿನಾಂಕಃ 12.02.2026

ಪಾಟೀಸವಾಲು **1** ನೇ ಪ್ರತಿವಾದಿ ಪರ ಶ್ರೀ ಕೆ ವಿ ಎ ವಕೀಲರಿಂದಃ

ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಜನ್ಮ ದಿನಾಂಕ ಗೊತ್ತಿಲ್ಲ. 1987 ರಲ್ಲಿ ಜನಿಸಿರುತ್ತೇನೆ. ನಮ್ಮ ಕುಟುಂಬದ ವಂಶಾವಳಿಯ ಬಗ್ಗೆ ನಮ್ಮ ಮನೆಯಲ್ಲಿ ದಾಖಲಾತಿಗಳು ಇರುತ್ತವೆ. ನನ್ನ ತಂದೆಯ ಕಾಲದಿಂದ ವಂಶಾವಳಿ ದಾಖಲಾತಿ ಇರುತ್ತದೆ ಅದಕ್ಕೂ ಪೂರ್ವದ ವಂಶಾವಳಿ ದಾಖಲಾತಿ ಇರುವುದಿಲ್ಲ. ನನ್ನ ತಾಯಿ ಮತ್ತು ನಾನು ಒಟ್ಟಿಗೆ ವಾಸ ಮಾಡುತ್ತಿದ್ದೆವು ನಮ್ಮ ಮನೆಯಲ್ಲಿ ಮರಣಹೊಂದಿರುತ್ತಾರೆ. ನನ್ನ ತಾಯಿ ಯಾವುದೆ ವ್ಯವಹಾರಕ್ಕೆ ಮನೆಯಿಂದ ಹೊರಗಡೆ ಹೋಗುವಾಗ ನನಗೆ ಮಾಹಿತಿ ನೀಡಿ ಹೋಗುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ಕಬ್ಬುರಗಿಯಿಂದ ಹೊರ ಹೋಗುವಾಗ ನನಗಾಗಲಿ , ನಮ್ಮ ಮನೆಯ ಯಾರಿಗಾಗಲಿ ಮಾಹಿತಿ ನೀಡುತ್ತಿದ್ದರೋ ಇಲ್ಲವೋ ಎಂದರೆ ಸಾಕ್ಷಿಯು ಯಾವುದೆ ಮಾಹಿತಿ ನೀಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಾನು ಖಾಯಂ ಆಗಿ ಕಬ್ಬುರಗಿಯಲ್ಲಿ ವಾಸ ಇರುತ್ತೇನೆ. ಆಗಾಗ ದುಡಿಯಲು ಮಂಗಳೂರ ಮತ್ತು ಗೋವಾಕ್ಕೆ 2008 ರಿಂದ 2015 ರವರೆಗೆ ಹೋಗುತ್ತಿದ್ದೆನು. ನಾನು ಮತ್ತು ನನ್ನ ಸಹೋದರರು ಒಟ್ಟಿಗೆ ಒಂದೆ ಮನೆಯಲ್ಲಿ ವಾಸ ಇರುತ್ತೇವೆ. ನನ್ನ ತಾಯಿ ಯಾವುದೇ ಕೇಲಸಕ್ಕೆ ಮನೆಯಿಂದ ಹೊರಟಾಗ ಎಲ್ಲಿಗೆ , ಯಾವ ಕೆಲಸಕ್ಕೆ ಎಂದು ನಾವು ಕೇಳುತ್ತಿರಲಿಲ್ಲ.

1 ನೇ ವಾದಿ ನನ್ನ ಚಿಕ್ಕಪ್ಪನ ಮಗ ಇರುತ್ತಾರೆ. ನನ್ನ ತಾಯಿ ಅವರ ಜೊತೆ ಹೊರಗೆ ಹೋಗಿ ಬರುತ್ತಿದ್ದಳು ಎಂದರೆ ಸರಿ. ನನ್ನ ತಾಯಿ ಶಂಕ್ರವ್ವ ಮತ್ತು ಲಕ್ಷ್ಮಣಗೌಡ ದಾವೆ ಹಾಕಿದ ಬಗ್ಗೆ ನಮಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ.

ನಮ್ಮ ತಾಯಿ ದಾವೆ ಮಾಡಿದಾಗಿನಿಂದಾಗಲೂ ನನಗೂ ಮತ್ತು ನನ್ನ ಸಹೋದರರಿಗೂ ಮಾಹಿತಿ ಇದ್ದರು ಕೂಡಾ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆಯ ತಂದೆ ತಾಯಿ ಹೆಸರು ಭೀಮನಗೌಡ ಮತ್ತು ಮಾಸವ್ವ ಇರುತ್ತದೆ. ಸದರಿ ಭೀಮನಗೌಡರಿಗೆ ಕನಕನಗೌಡ , ಮಾಸನಗೌಡ , ಮಲ್ಲವ್ವ ಎಂಬ ಮೂರು ಜನ ಮಕ್ಕಳು ಎಂದರೆ ಸರಿ. ಭೀಮನಗೌಡರಿಗೆ ಎಷ್ಟು ಜನ ಹೆಂಡತಿಯರು ಎಂದರೆ ಮಾಸವ್ವ ಒಬ್ಬಳೆ ಹೆಂಡತಿ ಇರುತ್ತಾರೆ ಎಂದು ನುಡಿಯುತ್ತಾರೆ. ಭೀಮನಗೌಡರಿಗೆ ಇಬ್ಬರು ಪತ್ನಿಯರು ಇದ್ದು ಇಬ್ಬರು ಹೆಸರು ಮಾಸವ್ವ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಬ್ಬರೆ ಪತ್ನಿ ಎಂದು ನುಡಿಯುತ್ತಾರೆ. ಭೀಮನಗೌಡರಿಗೆ ಮೊದಲನೆಯ ಪತ್ನಿಯಿಂದ ಮಕ್ಕಳು ಆಗದೆ ಇದುದ್ದರಿಂದ ಇನ್ನೊಬ್ಬ ಮಾಸವ್ವರವರನ್ನು ವಿವಾಹ ಆಗಿದ್ದರು ಎಂದರೆ ಸರಿಯಲ್ಲ. 2 ನೇ ಪತ್ನಿಯಿದ ಕನಕಗೌಡ , ಮಾಸನಗೌಡ ಮತ್ತು ಮಲ್ಲವ್ವ ಎಂಬ ಮಕ್ಕಳು ಜನಿಸಿರುತ್ತಾರೆ ಎಂದರೆ ಸಾಕ್ಷಿಯು ಒಬ್ಬಳೆ ಹೆಂಡತಿ ಇದ್ದು ಅವರ ಮಕ್ಕಳು ಇರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮಾಸವ್ವಳ ತಂದೆ ತಾಯಿ ಹೆಸರು ಗೌರಮ್ಮ ಮತ್ತು ದ್ಯಾಮನಗೌಡ ಇರುತ್ತದೆ. ಸದರಿ ಗೌರಮ್ಮರವರಿಗೆ ಬಸನಗೌಡ ಎಂಬ ಸಹೋದರ ಇದ್ದಾ ಎಂದರೆ ಸರಿ. ಸದರಿ ಬಸನಗೌಡ ಮದುವೆ ಆಗದೆ ಮರಣಹೊಂದಿರುತ್ತಾರೆ ಎಂದರೆ ಸರಿ. ಸದರಿ ಗೌರವ್ವಳ ಮಗಳು ಮಾಸವ್ವ ಭೀಮನಗೌಡರ ಮೊದಲನೇಯ ಹೆಂಡತಿ ಎಂದರೆ ಸಾಕ್ಷಿಯು ಒಬ್ಬರೆ ಹೆಂಡತಿ ಎಂದು ನುಡಿಯುತ್ತಾರೆ. ನನಗೆ ಹಿಂದಿನ ವಂಶಾವಳಿಯ ಬಗ್ಗೆ ಮಾಹಿತಿ ಇಲ್ಲದೆ ಇದ್ದರು ಪ್ರಕರಣದ ಅನುಕೂಲಕ್ಕೆ ಒಬ್ಬಳೆ ಹೆಂಡತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಾಯಿ 2 ನೇ ವಾದಿ ಶಂಕ್ರವ್ವಳ ತಂದೆ ತಾಯಿ ಹೆಸರು ಹನಮಪ್ಪ ಮತ್ತು ದೇವಕ್ಕ್ಯಾವ್ವ ಇರುತ್ತದೆ. ಅವರ ತವರು ಮನೆ ಹುನಗುಂದ ತಾಲೂಕಿನ ರವಡಿಹಾಳ

ಗ್ರಾಮ ಇರುತ್ತದೆ. ನನ್ನ ತಾಯಿಯ ಅಜ್ಜಾ ಅಜ್ಜಿಯವರ ಹೆಸರು ನನಗೆ ಗೊತ್ತಿಲ್ಲ. ನನ್ನ ತಾಯಿಯ ತವರು ಮನೆಯ ವಂಶಾವಳಿಯಲ್ಲಿ ಬಾಲವ್ವ ಎಂಬ ಹೆಸರಿನ ವ್ಯಕ್ತಿ ಯಾರು ಇಲ್ಲ ಎಂದರೆ ನನಗೆ ಗೊತ್ತಿಲ್ಲ.

ಗೌರವ್ವಳ ತಾಯಿಯ ಹೆಸರು ಬಾಲವ್ವ ಎಂದರೆ ಸರಿ. ಸದರಿ ಬಾಲವ್ವಳ ಗಂಡನ ಹೆಸರು ಕನಕಗೌಡ ಎಂದರೆ ಸರಿ. ಸದರಿ ಕನಕಗೌಡನ ತಂದೆ ಹೆಸರು ಭೀಮನಗೌಡ ಎಂದರೆ ಸರಿಯಲ್ಲ. ಕನಕಗೌಡರ ತಂದೆ ಹೆಸರು ಏನು ಎಂದು ನನಗೆ ಗೊತ್ತಿಲ್ಲ. ಮಾಸವ್ವ ಕನಕಗೌಡರ ಮೊದಲ ಪತ್ನಿ ಇದ್ದು ಬಾಲವ್ವ ಅವರ 2 ನೇ ಪತ್ನಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಬ್ಬಳೆ ಹೆಂಡತಿ ಬಾಲವ್ವ ಎಂದು ನುಡಿಯುತ್ತಾರೆ. ಕನಕಗೌಡರ ಮೊದಲ ಪತ್ನಿ ಮಾಸವ್ವ ಇದ್ದು ಅವರ 2 ನೇ ಪತ್ನಿ ಬಾಲವ್ವ ಇದ್ದ ವಿಚಾರ ನನಗೆ ಗೊತ್ತಿದ್ದರು ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿ ಜಾಲವ್ವಳನ್ನು ನೋಡಿರುತ್ತೇನೆ. ಅವರ ಗಂಡನ ಹೆಸರು ಗೊತ್ತಿಲ್ಲ. ಅವರ ಮನೆತನದ ಹೆಸರು ಪೂಜಾರಿ ಇರುತ್ತದೆ. ಸದರಿ ಜಾಲವ್ವಳ ತಂದೆ ತಾಯಿ ಹೆಸರು ಗೊತ್ತಿಲ್ಲ. ಜಾಲವ್ವಳ ತಾಯಿ ಹೆಸರು ಮಾಸವ್ವ ಇದ್ದು ಸದರಿ ಮಾಸವ್ವ ಕನಕಗೌಡರ ಮೊದಲ ಪತ್ನಿ ಎಂದರೆ ಸರಿಯಲ್ಲ. ಜಾಲವ್ವಳಿಗೆ ಚಂದಾಲಿಂಗಪ್ಪ ಮತ್ತು ಗ್ಯಾನಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಚಂದಾಲಿಂಗಪ್ಪನಿಗೆ ಆರು ಜನ ಮಕ್ಕಳು ಇದ್ದು ಅವರೆಂದರೆ ಮಾಸವ್ವ , ಮಾಸಪ್ಪ , ಯಮನೂರಪ್ಪ , ರೇಖವ್ವ , ಶರಣಪ್ಪ , ಗೀತವ್ವ ಇರುತ್ತಾರೆ.

ಜಾಲವ್ವಳನ್ನು ಯಾವ ಕಾರಣಕ್ಕಾಗಿ ಈ ದಾವೆಯಲ್ಲಿ ನನ್ನ ತಾಯಿ ಸೇರಿಸಿದ್ದಾರೆ ಎಂದರೆ ಸಾಕ್ಷಿಯು ಒಂದು ಪ್ರಕರಣದಲ್ಲಿ ರಾಜಿ ಡಿಕ್ರಿ ಮಾಡಿಕೊಂಡಿದ್ದರಿಂದ ಅವರನ್ನು ಸೇರಿಸಿರುತ್ತಾರೆ ಎಂದು ನಮಗೆ ದಾಖಲಾತಿ ತಗೆಸಿದ

ಮೇಲೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಪ್ರಕರಣ ಸಂ. 354/2017 ಇರುತ್ತದೆ. ಸದರಿ ಪ್ರಕರಣ ಯಾರ ಯಾರ ಮದ್ಯೆ ನಡೆದಿದೆ ಎಂದು ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನನ್ನ ತಂದೆ ಹೆಸರಿನಲ್ಲಿದ್ದ ಎಲ್ಲಾ ಆಸ್ತಿಗಳನ್ನು ಸೇರಿಸಿ ಡಿಕ್ರಿ ಮಾಡಿಕೊಂಡಿದ್ದರು. ಸದರಿ ಡಿಕ್ರಿ ಯಾರ ಪರವಾಗಿ ಆಗಿದೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ವಾದಿಯರು ಒಟ್ಟು 8 ಆಸ್ತಿಗಳ ಕುರಿತು ಪರಿಹಾರ ಕೋರಿರುತ್ತಾರೆ. ಸದರಿ 8 ಆಸ್ತಿಗಳು ಸರ್ವೆ ನಂ. 9*4 , ಸರ್ವೆ ನಂ. 9 ಎ ಬಿ , ಸರ್ವೆನಂ. 20 , ಸರ್ವೆ ನಂ. 21 ಹಿಸ್ಸಾ 3 , ಸರ್ವೆ ನಂ. 21 ಅ, ಸರ್ವೆನಂ. 84 ಹಿಸ್ಸಾ 2 + 3 +4 + 5 , ಸರ್ವೆನಂ. 32 , ಸರ್ವೆ ನಂ. 45 ಇರುತ್ತವೆ.

ದಾವೆ ಮಾಡುವ ಸಮಯದಲ್ಲಿ ಮೇಲ್ಕಂಡ ಜಮೀನುಗಳ ಪೈಕಿ 6 ಜಮೀನುಗಳ ಖಾತೆಯು ನನ್ನ ತಂದೆಯ ಹೆಸರಿನಲ್ಲಿದ್ದವು ಉಳಿದ ಎರಡು ಆಸ್ತಿಗಳಾದ ಸರ್ವೆ ನಂ. 32 ಮತ್ತು ಸರ್ವೆ ನಂ. 45 ರ ಖಾತೆಯು ಚಂದಾಲಿಂಗಪ್ಪ ಮಾಸಪ್ಪ ಪೂಜಾರ ರವರ ಹೆಸರಿನಲ್ಲಿರುತ್ತವೆ. ಮೇಲ್ಕಂಡ 6 ಜಮೀನುಗಳ ಖಾತೆಯು ನಮ್ಮ ತಂದೆಗೆ ಬರುವ ಪೂರ್ವದಲ್ಲಿ ಬಾಲವ್ವ ಕನಕಗೌಡ ಪೋಲೀಸಪಾಟೀಲರವರ ಹೆಸರಿನಲ್ಲಿತ್ತು. ಬಾಲವ್ವಳರವರ ಹೆಸರಿನಿಂದ ನಮ್ಮ ತಂದೆಯ ಹೆಸರಿಗೆ ಮ್ಯುಟೇಶ ಆಧಾರದ ಮೇಲೆ ಆಗಿರುತ್ತದೆ. ಸದರಿ ಮ್ಯುಟೇಶನ ವಾರಸಾ ಮೇರೆಗೆ ಆಗಿರುತ್ತದೆ. ಬಾಲವ್ವ ಜೀವಂತ ಇದ್ದಾಗ ನಾನು ನೋಡಿರವುದಿಲ್ಲ. ಅವರು ಯಾವಾಗ ಮರಣಹೊಂದಿದರು ಎಂದು ನನಗೆ ಗೊತ್ತಿಲ್ಲ.

ಕನಕಗೌಡರ ತಂದೆ ತಾಯಿ ಯಾವಾಗ ಮರಣಹೊಂದಿದರು ಎಂದರೆ ಸಾಕ್ಷಿಯು ಅಜ್ಜನು 1994 ರಲ್ಲಿ ಮರಣಹೊಂದಿರುತ್ತಾರೆ. ಅಜ್ಜಿ ಯಾವಾಗ ಮರಣಹೊಂದಿದರು ಎಂದು ನನಗೆ ಗೊತ್ತಿಲ್ಲ. ಭೀಮನಗೌಡರು ಮರಣಹೊಂದುವ ಪೂರ್ವದಲ್ಲಿ ಗೌರವ್ವ ಮತ್ತು ಬಾಲವ್ವ ಮರಣಹೊಂದಿರುತ್ತಾರೆ ಎಂದರೆ ಸರಿ. ನನ್ನ

ತಂದೆ ಹೆಸರಿಗೆ ಹಕ್ಕು ವರ್ಗಾವಣೆಯು ಯಾವ ವರ್ಷದಲ್ಲಿ ಆಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅದರಲ್ಲಿನ ವಿವರಗಳನ್ನು ನಾನು ನೋಡಿರುವುದಿಲ್ಲ.

**(** ಈ ಹಂತದಲ್ಲಿ ಮುಂದುವರೆದು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು**.** ಅನುಮತಿಸಿ ನೀಡಲಾಯಿತು**)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು, ಕುಷ್ಟಗಿ**